## **ಕರ್ನಾಟಕ ಸರ್ಕಾರದ ನಡವಳಿಗಳು**

**ವಿಷಯ:** 2016–17ನೇ ಸಾಲಿನಿಂದ ಕೈಮಗ್ಗ ಮತ್ತು ವಿದ್ಯುತ್ ಮಗ್ಗಗಳ ನೇಕಾರರಿಗೆ ಸಹಕಾರ ಬ್ಯಾಂಕುಗಳು ಮತ್ತು ಸಂಘಗಳ ಮೂಲಕ ಶೇ.1 ರ ಬಡ್ಡಿ ದರದಲ್ಲಿ ರೂ. 2.00 ಲಕ್ಷಗಳವರೆಗೆ ಸಾಲ ಮತ್ತು ಶೇ. 3 ರ ಬಡ್ಡಿದರದಲ್ಲಿ ರೂ. 2.00 ಲಕ್ಷಗಳಿಂದ ರೂ. 5.00 ಲಕ್ಷಗಳವರೆಗಿನ ಸಾಲ ಸೌಲಭ್ಯಕ್ಕೆ ಬಡ್ಡಿ ಸಹಾಯಧನವನ್ನು ನೀಡಲು ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ

**ಓದಲಾಗಿದೆ:**
1. ಮಾನ್ಯ ಮುಖ್ಯಮಂತ್ರಿಗಳ 2016–17ನೇ ಸಾಲಿನ ಆಯವ್ಯಯ ಘೋಷಣೆ ಕಂಡಿಕೆ ಸಂಖ್ಯೆ: 381.
2. ಜವಳಿ ಅಭಿವೃದ್ಧಿ ಆಯುಕ್ತರ ಪತ್ರ ಸಂಖ್ಯೆ: ಕೈಜಇ/ಜವಳಿ/ಎ–1/ಹೊ.ಯೋ/2016–17, ದಿ:13.05.2016

*********

**ಪ್ರಸ್ತಾವನೆ:**

ಮೇಲೆ ಓದಲಾದ (1) ರ 2016–17ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಮಾನ್ಯ ಮುಖ್ಯಮಂತ್ರಿಯವರು ಕಂಡಿಕೆ: 381ರಲ್ಲಿ ಈ ಕೆಳಕಂಡಂತೆ ಘೋಷಿಸಿದ್ದಾರೆ.

> **"ರಾಜ್ಯ ಕೈಮಗ್ಗ ಮತ್ತು ವಿದ್ಯುತ್ ಮಗ್ಗಗಳ ನೇಕಾರರಿಗೆ ಸಹಕಾರ ಬ್ಯಾಂಕುಗಳು ಮತ್ತು ಸಂಘಗಳ ಮೂಲಕ ಶೇ.1 ರ ಬಡ್ಡಿ ದರದಲ್ಲಿ ರೂ. 2.00 ಲಕ್ಷಗಳವರೆಗೆ ಸಾಲ ಮತ್ತು ಶೇ. 3 ರ ಬಡ್ಡಿದರದಲ್ಲಿ ರೂ. 2.00 ಲಕ್ಷಗಳಿಂದ ರೂ. 5.00 ಲಕ್ಷಗಳವರೆಗೆ ಸಾಲ ಸೌಲಭ್ಯ"**

2016–17ನೇ ಸಾಲಿನ ನೇಕಾರರ ವಿಶೇಷ ಪ್ಯಾಕೇಜ್ ಯೋಜನೆಯ ಲೆಕ್ಕ ಶೀರ್ಷಿಕೆ : 2851–00–103–0–62–059 ರಲ್ಲಿ ಹಂಚಿಕೆ ಮಾಡಲಾದ ಒಟ್ಟು ಅನುದಾನ ರೂ.10,375.80 ಲಕ್ಷಗಳಲ್ಲಿ ರೂ.1440.00 ಲಕ್ಷಗಳನ್ನು ಈ ಮೇಲೆ ಘೋಷಿಸಲಾದ ಹೊಸ ಯೋಜನೆಗೆ ನಿಗಧಿಪಡಿಸಲಾಗಿದೆ. ನೇಕಾರರು ನೇಕಾರಿಕೆ ಕಸಬುಗಾಗಿ ನೇಕಾರರ ಸಹಕಾರ ಸಂಘಗಳು / ಕೈಗಾರಿಕಾ ಸಹಕಾರ ಬ್ಯಾಂಕ್‌ಗಳು/ ಕೃಷಿಯೇತರ / ಕೃಷಿ ಪತ್ತಿನ ಸಹಕಾರ ಸಂಘಗಳು / ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು ಹಾಗೂ ಇತರೆ ಸಹಕಾರ ಬ್ಯಾಂಕುಗಳಿಂದ ಪಡೆದ ಸಾಲಕ್ಕೆ ಸರ್ಕಾರದಿಂದ ನೀಡಲಾಗುವ ಬಡ್ಡಿ ಸಹಾಯಧನ ಯೋಜನೆಯಾಗಿರುತ್ತದೆ.

ಈ ಹಿಂದೆ ನೇಕಾರರ ಸಹಕಾರ ಸಂಘಗಳು / ಕೈಗಾರಿಕಾ ಸಹಕಾರ ಬ್ಯಾಂಕ್‌ಗಳು/ ಕೃಷಿಯೇತರ / ಕೃಷಿ ಪತ್ತಿನ ಸಹಕಾರ ಸಂಘಗಳು / ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು ಹಾಗೂ ಇತರೆ ಸಹಕಾರ ಬ್ಯಾಂಕುಗಳಿಂದ ನೇಕಾರರು ಪಡೆದ ರೂ.3.00ಲಕ್ಷಗಳವರೆಗಿನ ಸಾಲಕ್ಕೆ ವಿಧಿಸಿದ ಬಡ್ಡಿ ದರದಲ್ಲಿ ಶೇ.3 ರಷ್ಟು ಬಡ್ಡಿಯನ್ನು ನೇಕಾರರು ಪಾವತಿಸುತ್ತಿದ್ದು, ಬಾಕಿ ಉಳಿದ ಬಡ್ಡಿಯನ್ನು ಸರ್ಕಾರದಿಂದ ಗರಿಷ್ಠ ಶೇ.9 ರಷ್ಟು ಬಡ್ಡಿಯನ್ನು ಬಡ್ಡಿ ಸಹಾಯಧನವಾಗಿ ಸರ್ಕಾರದಿಂದ ಪಾವತಿಸಲಾಗುತ್ತಿದೆ.

ಪ್ರಸ್ತುತ 2016–17ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಿರುವಂತೆ, ರಾಜ್ಯದ ನೇಕಾರರು ನೇಕಾರರ ಸಹಕಾರ ಸಂಘಗಳು / ಕೈಗಾರಿಕಾ ಸಹಕಾರ ಬ್ಯಾಂಕ್‌ಗಳು/ ಕೃಷಿಯೇತರ / ಕೃಷಿ ಪತ್ತಿನ ಸಹಕಾರ ಸಂಘಗಳು / ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು ಹಾಗೂ ಇತರೆ ಸಹಕಾರ ಬ್ಯಾಂಕುಗಳಿಂದ ಪಡೆದ ಸಾಲ ಮತ್ತು ಬಡ್ಡಿ ಹಣದ ಹೊಣೆಗಾರಿಕೆಯನ್ನು ಕಡಿಮೆ ಮಾಡುವ ಸಲುವಾಗಿ ಸುಮಾರು 8000 ಕೈಮಗ್ಗ ಮತ್ತು ವಿದ್ಯುತ್ ಮಗ್ಗ ನೇಕಾರರಿಗೆ ಅನುಕೂಲವಾಗುವಂತೆ ಸಹಕಾರಿ ಬ್ಯಾಂಕ್ ಮತ್ತು ಸಂಘಗಳಿಂದ ಶೇ.1ರ ಬಡ್ಡಿ ದರದಲ್ಲಿ ರೂ.2.00 ಲಕ್ಷಗಳವರೆಗೆ ಮತ್ತು ಶೇ. 3 ರ ಬಡ್ಡಿ ದರದಲ್ಲಿ ರೂ.2.00 ಲಕ್ಷಗಳಿಂದ ರೂ.5.00 ಲಕ್ಷಗಳವರೆಗೆ ಸಾಲ ಸೌಲಭ್ಯ ಒದಗಿಸಲು ಯೋಜಿಸಲಾಗಿರುತ್ತದೆ.

ನೇಕಾರರು ನೇಕಾರಿಕೆ ವೃತ್ತಿಗಾಗಿ ನೇಕಾರರ ಸಹಕಾರ ಸಂಘಗಳು / ಕೈಗಾರಿಕಾ ಸಹಕಾರ ಬ್ಯಾಂಕ್‌ಗಳು/ ಕೃಷಿಯೇತರ / ಕೃಷಿ ಪತ್ತಿನ ಸಹಕಾರ ಸಂಘಗಳು / ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು ಹಾಗೂ ಇತರೆ ಸಹಕಾರ ಬ್ಯಾಂಕುಗಳಿಂದ ಪಡೆಯುವ ಎಲ್ಲಾ ರೀತಿಯ ಅಲ್ಪಾವಧಿ, ಮಧ್ಯಮಾವಧಿ ಮತ್ತು ಧೀರ್ಘಾವಧಿ ಸಾಲಗಳಿಗೆ ಸರ್ಕಾರದಿಂದ ಬಡ್ಡಿ ಸಹಾಯಧನವನ್ನು ಅಂದರೆ ರೂ.2.00 ಲಕ್ಷಗಳವರೆಗಿನ ಸಾಲಕ್ಕೆ ನೇಕಾರರು ಶೇ.1 ರಷ್ಟು ಬಡ್ಡಿ ಪಾವತಿಸಿದ ನಂತರ, ಸಾಲ ನೀಡುವ ಸಂಸ್ಥೆಗಳು ವಿಧಿಸುವ ಬಡ್ಡಿ ದರದಲ್ಲಿ ಬಾಕಿ ಉಳಿಯುವ ಗರಿಷ್ಠ ಶೇ.10ರ ಬಡ್ಡಿಯನ್ನು ಹಾಗೂ ರೂ.2.00 ಲಕ್ಷದಿಂದ ರೂ.5.00 ಲಕ್ಷದವರೆಗಿನ ಸಾಲಕ್ಕೆ ನೇಕಾರರು ಶೇ.3 ರಷ್ಟು ಬಡ್ಡಿ ಪಾವತಿಸಿದ ನಂತರ ಸಾಲ ನೀಡುವ ಸಂಸ್ಥೆಗಳು ವಿಧಿಸುವ ಬಡ್ಡಿ ದರದಲ್ಲಿ ಬಾಕಿ ಉಳಿಯುವ ಗರಿಷ್ಠ ಶೇ.8 ರಷ್ಟು ಬಡ್ಡಿಯನ್ನು ಬಡ್ಡಿ ಸಹಾಯಧನವಾಗಿ ಸರ್ಕಾರದಿಂದ ನೀಡಲು ಯೋಜಿಸಲಾಗಿರುತ್ತದೆ.

ಓದಲಾದ (2) ರ ಜವಳಿ ಅಭಿವೃದ್ಧಿ ಆಯುಕ್ತರ ಪತ್ರದಲ್ಲಿ ಸದರಿ ಯೋಜನೆಗೆ ಪ್ರಸ್ತಾವನೆ ಸಲ್ಲಿಸಿ ಯೋಜನೆ ಅನುಷ್ಠಾನಗೊಳಿಸಲು ಸರ್ಕಾರದ ಆಡಳಿತಾತ್ಮಕ ಅನುಮೋದನೆ ನೀಡುವಂತೆ ಕೋರಿರುತ್ತಾರೆ.

ಜವಳಿ ಅಭಿವೃದ್ಧಿ ಆಯುಕ್ತರ ಪ್ರಸ್ತಾವನೆಯನ್ನು ಪರಿಶೀಲಿಸಿ, ಕೆಳಕಂಡಂತೆ ಆದೇಶಿಸಲಾಗಿದೆ.

**ಸರ್ಕಾರಿ ಆದೇಶ ಸಂಖ್ಯೆ: ವಾಕೈ 25 ಜಕೈಯೋ 2016, ಬೆಂಗಳೂರು, ದಿನಾಂಕ: 09.12.2016**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, **2016-17ನೇ** ಸಾಲಿನ ಆಯವ್ಯಯ ಘೋಷಣೆ ಕಂಡಿಕೆ : 381 ರನ್ವಯ ನೇಕಾರರ ಸಹಕಾರ ಸಂಘಗಳು / ಕೈಗಾರಿಕಾ ಸಹಕಾರ ಬ್ಯಾಂಕ್‌ಗಳು/ ಕೃಷಿಯೇತರ / ಕೃಷಿ ಪತ್ತಿನ ಸಹಕಾರ ಸಂಘಗಳು / ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು ಹಾಗೂ ಇತರೆ ಸಹಕಾರ ಬ್ಯಾಂಕುಗಳು ರಾಜ್ಯದ ಕೈಮಗ್ಗ ಮತ್ತು ವಿದ್ಯುತ್‌ಮಗ್ಗಗಳ ನೇಕಾರರಿಗೆ ನೇಕಾರಿಕೆ ಮತ್ತು ನೇಕಾರಿಕೆಗೆ ಸಂಬಂಧಿಸಿದ ಉದ್ದೇಶಗಳಿಗಾಗಿ **ಶೇ.1** ರ ಬಡ್ಡಿ ದರದಲ್ಲಿ **ರೂ.2.00** ಲಕ್ಷಗಳವರೆಗೆ ನೀಡುವ ಸಾಲಕ್ಕೆ ಸರ್ಕಾರದಿಂದ ಗರಿಷ್ಠ **ಶೇ.10ರಷ್ಟು** ಬಡ್ಡಿ ಸಹಾಯಧನ ಮತ್ತು **ಶೇ.3** ರ ಬಡ್ಡಿ ದರದಲ್ಲಿ **ರೂ.2.00 ಲಕ್ಷಗಳಿಂದ ರೂ.5.00** ಲಕ್ಷಗಳವರೆಗೆ ನೀಡುವ ಸಾಲಕ್ಕೆ ಗರಿಷ್ಠ **ಶೇ.8** ರಷ್ಟು ಬಡ್ಡಿ ಸಹಾಯಧನವನ್ನು ಎಲ್ಲಾ ರೀತಿಯ ಅಲ್ಪಾವಧಿ, ಮಧ್ಯಮಾವಧಿ ಮತ್ತು ಧೀರ್ಘಾವಧಿ ಸಾಲಕ್ಕೆ ನೀಡಲು ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿದೆ.

ಈ ಯೋಜನೆಯನ್ನು **ಅನುಬಂಧದಲ್ಲಿ** ಲಗತ್ತಿಸಿರುವ ಮಾರ್ಗಸೂಚಿಯಂತೆ ಹಾಗೂ ಮಾರ್ಗಸೂಚಿಯಲ್ಲಿ ವಿಧಿಸಿರುವ ಷರತ್ತುಗಳಿಗೊಳಪಟ್ಟು ಯೋಜನೆ ಅನುಷ್ಠಾನಗೊಳಿಸುವುದು. ಈ ಯೋಜನೆಗೆ ವೆಚ್ಚವನ್ನು 2016-17ನೇ ಸಾಲಿನ ನೇಕಾರರ ವಿಶೇಷ ಪ್ಯಾಕೇಜ್ ಯೋಜನೆಯ ಲೆಕ್ಕ ಶೀರ್ಷಿಕೆ **2851-00-103-0-62-059** ಅಡಿಯಲ್ಲಿ ವೆಚ್ಚ ಭರಿಸಲು ಆದೇಶಿಸಲಾಗಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ ಆಇ.374.ವೆಚ್ಚ-1/2016 ದಿನಾಂಕ 28-11-2016 ಮತ್ತು ಯೋಜನಾ ಇಲಾಖೆಯ ಟಿಪ್ಪಣಿ ಸಂಖ್ಯೆ ಪಿ.ಡಿ.16.ಎಫ್.ಆರ್.ಓ/2016 ದಿನಾಂಕ 26-07-2016 ರಲ್ಲಿ ನೀಡಿದ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

**(ಕೆ. ಬೋರಲಿಂಗಯ್ಯ)**
ಸರ್ಕಾರದ ಉಪ ಕಾರ್ಯದರ್ಶಿ (ಜವಳಿ)
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ

ಇವರಿಗೆ ;

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು ಇವರಿಗೆ ಮುಂದಿನ ವಿಶೇಷ ರಾಜ್ಯ ಪತ್ರದಲ್ಲಿ ಪ್ರಕಟಿಸಿ 50 ಪ್ರತಿಗಳನ್ನು ಒದಗಿಸಲು ಕೋರಿದೆ (ಮುಖ ಪತ್ರದೊಂದಿಗೆ ಕಳುಹಿಸಿದೆ).

...3

ಪ್ರತಿಗಳು:

1. ಮಹಾಲೇಖಪಾಲರು, (ಲೆಕ್ಕಪತ್ರ:ಲೆಕ್ಕಪರಿಶೋಧನೆ) ಕರ್ನಾಟಕ, ಬೆಂಗಳೂರು.
2. ಸನ್ಮಾನ್ಯ ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ವಿಕಾಸ ಸೌಧ, ಬೆಂಗಳೂರು.
4. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಯೋಜನಾ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
5. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಹಕಾರ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
6. ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು.
7. ಸಹಕಾರ ಸಂಘಗಳ ನಿಬಂಧಕರು, ನಂ 1, ಅಲಿ ಆಸ್ಕರ್ ರಸ್ತೆ, ಬೆಂಗಳೂರು-51.
8. ನಿರ್ದೇಶಕರು, ಸಹಕಾರ ಸಂಘಗಳ ಲೆಕ್ಕ ಪರಿಶೋಧಕರ ಇಲಾಖೆ, ನಂ. 17, ಜಯನಿವಾಸ, ಶಂಕರಮಠ, ಬಸವನಗುಡಿ, ಬೆಂಗಳೂರು-560 004.(ಸಂಬಂಧಿಸಿದ ಎಲ್ಲಾ ಜಿಲ್ಲಾ ಉಪ ನಿರ್ದೇಶಕರುಗಳಿಗೆ ಕಳುಹಿಸಿ ಸೂಕ್ತ ನಿರ್ದೇಶನ ನೀಡುವಂತೆ ಕೋರಿದೆ)
9. ಕೈಮಗ್ಗ ಮತ್ತು ಜವಳಿ ಇಲಾಖೆಯ ಎಲ್ಲಾ ಜಿಲ್ಲಾ ಜಂಟಿ/ಉಪ/ಸಹಾಯಕ ನಿರ್ದೇಶಕರುಗಳಿಗೆ (ಜವಳಿ ಅಭಿವೃದ್ಧಿ ಆಯುಕ್ತರ ಮೂಲಕ)
10. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ನಿ., ಉತ್ತುಂಗ, ನಂ1, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-18.
11. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ನಿ., ಚಾಮರಾಜಪೇಟೆ, ಬೆಂಗಳೂರು-18.
12. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳ ನಿ., ಕೆಂಗಲ್ ಹನುಮಂತಯ್ಯ ರಸ್ತೆ, ಬೆಂಗಳೂರು.
13. ಆಂತರಿಕ ಆರ್ಥಿಕ ಸಲಹೆಗಾರರು, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.
14. ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ ವೆಚ್ಚ-1, ವಿಧಾನ ಸೌಧ, ಬೆಂಗಳೂರು.
15. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿ., ಬೆಂಗಳೂರು.
16. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಜವಳಿ ಮೂಲಸೌಲಭ್ಯ ಅಭಿವೃದ್ಧಿ ನಿಗಮ ನಿ., ಬೆಂಗಳೂರು.
17. ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ನೃಪತುಂಗ ರಸ್ತೆ, ಬೆಂಗಳೂರು.
18. ಜಂಟಿ ನಿರ್ದೇಶಕರು, ಜಿಲ್ಲಾ ಖಜಾನೆ, ಬೆಂಗಳೂರು.
19. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.
20. ಸಂಕಲನಕಾರರು, ಮಾಸಿಕ ರಾಜ್ಯ ಪತ್ರ

# ಅನುಬಂಧ

## ಸರ್ಕಾರಿ ಆದೇಶ ಸಂಖ್ಯೆ: ವಾಕೈ 25 ಜಕೈಯೋ 2016, ಬೆಂಗಳೂರು, ದಿನಾಂಕ: 09.12.2016

ಕೈಮಗ್ಗ ಮತ್ತು ವಿದ್ಯುತ್‌ಮಗ್ಗಗಳ ನೇಕಾರರಿಗೆ ನೇಕಾರಿಕೆ ಉದ್ದೇಶಕ್ಕಾಗಿ ಸಹಕಾರ ಬ್ಯಾಂಕ್‌ಗಳು ಮತ್ತು ಸಹಕಾರ ಸಂಘಗಳ ಮೂಲಕ **ಶೇ.1** ರ ಬಡ್ಡಿ ದರದಲ್ಲಿ **ರೂ.2.00** ಲಕ್ಷಗಳ ವರೆಗೆ ಸಾಲ ಮತ್ತು ಶೇ.3ರ ಬಡ್ಡಿ ದರದಲ್ಲಿ **ರೂ.2.00** ಲಕ್ಷಗಳಿಂದ **ರೂ.5.00** ಲಕ್ಷಗಳ ವರೆಗೆ ಸಾಲ ಸೌಲಭ್ಯ ಒದಗಿಸುವ ಬಗ್ಗೆ ಮಾರ್ಗಸೂಚಿ ;

ನೇಕಾರರ ಸಹಕಾರ ಸಂಘಗಳು / ಕೈಗಾರಿಕಾ ಸಹಕಾರ ಬ್ಯಾಂಕ್‌ಗಳು/ ಕೃಷಿಯೇತರ / ಕೃಷಿ ಪತ್ತಿನ ಸಹಕಾರ ಸಂಘಗಳು / ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು ಹಾಗೂ ಇತರೆ ಸಹಕಾರ ಬ್ಯಾಂಕುಗಳು ರಾಜ್ಯದ ಕೈಮಗ್ಗ ಮತ್ತು ವಿದ್ಯುತ್‌ಮಗ್ಗಗಳ ನೇಕಾರರಿಗೆ ನೇಕಾರಿಕೆ ಮತ್ತು ನೇಕಾರಿಕೆಗೆ ಸಂಬಂಧಿಸಿದ ಉದ್ದೇಶಗಳಿಗಾಗಿ **ಶೇ.1** ರ ಬಡ್ಡಿ ದರದಲ್ಲಿ **ರೂ.2.00** ಲಕ್ಷಗಳವರೆಗೆ ನೀಡುವ ಸಾಲಕ್ಕೆ ಸರ್ಕಾರದಿಂದ ಗರಿಷ್ಠ **ಶೇ.10**ರಷ್ಟು ಬಡ್ಡಿ ಸಹಾಯಧನ ಮತ್ತು **ಶೇ.3** ರ ಬಡ್ಡಿ ದರದಲ್ಲಿ **ರೂ.2.00**ಲಕ್ಷಗಳಿಂದ **ರೂ.5.00** ಲಕ್ಷಗಳವರೆಗೆ ನೀಡುವ ಸಾಲಕ್ಕೆ ಗರಿಷ್ಠ **ಶೇ.8** ರಷ್ಟು ಬಡ್ಡಿ ಸಹಾಯಧನವನ್ನು 2016-17 ನೇ ಸಾಲಿನಿಂದ ಜಾರಿಗೆ ಬರುವಂತೆ ಎಲ್ಲಾ ರೀತಿಯ ಅಲ್ಪಾವಧಿ, ಮಧ್ಯಮಾವಧಿ ಮತ್ತು ಧೀರ್ಘಾವಧಿ ಸಾಲಗಳಿಗೆ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಯೋಜನೆ ಅನುಷ್ಠಾನಗೊಳಿಸಲು ಮಾರ್ಗಸೂಚಿಯನ್ನು ಅನುಮೋದಿಸಲಾಗಿದೆ.

1) ಈ ಯೋಜನೆಯು ದಿನಾಂಕ: **01-04-2016** ರಿಂದ ನೇಕಾರರ ಸಹಕಾರ ಸಂಘಗಳು/ ಕೃಷಿ ಪತ್ತಿನ ಸಹಕಾರ ಸಂಘಗಳು / ಕೃಷಿಯೇತರ ಪತ್ತಿನ ಸಹಕಾರ ಸಂಘಗಳು / ಸಹಕಾರ ಬ್ಯಾಂಕ್‌ಗಳು (ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್‌ಗಳು, ಪಟ್ಟಣ ಸಹಕಾರಿ ಬ್ಯಾಂಕ್‌ಗಳು, ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ಗಳು ಹಾಗೂ ಇತರೆ ಕೈಗಾರಿಕಾ ಸಹಕಾರ ಬ್ಯಾಂಕ್‌ಗಳು) ನೇಕಾರಿಕೆ ಮತ್ತು ನೇಕಾರಿಕೆಗೆ ಸಂಬಂಧಪಟ್ಟ ಚಟುವಟಿಕೆಗಳಾದ ಮಗ್ಗಗಳ ಸ್ಥಾಪನೆ, ಕಚ್ಚಾಮಾಲು ಖರೀದಿ ಮತ್ತು ಸಿದ್ದ ವಸ್ತುಗಳ ಉತ್ಪಾದನೆ, ಮಗ್ಗ ಪೂರ್ವ ಚಟುವಟಿಕೆಗಳು ಮತ್ತು ಮಗ್ಗ ನಂತರದ ಸಂಸ್ಕರಣೆ ಚಟುವಟಿಕೆಗಳು ಇತ್ಯಾದಿ ಉದ್ದೇಶಗಳಿಗೆ ನೀಡುವ ಅಲ್ಪಾವಧಿ, ಮಧ್ಯಮಾವಧಿ ಮತ್ತು ದೀರ್ಘಾವಧಿ ಸಾಲಗಳಿಗೆ (ಕ್ಯಾಶ್ ಕ್ರೆಡಿಟ್ ಸಾಲಗಳನ್ನು ಹೊರತು ಪಡಿಸಿ) ಮಾತ್ರ ಅನ್ವಯಿಸುತ್ತದೆ.

2) ಮೇಲ್ಕಂಡ ಎಲ್ಲಾ ಸಹಕಾರ ಬ್ಯಾಂಕ್ / ಸಂಘಗಳು ಮತ್ತು ಸಾಲ ನೀಡುವ ಸಂಸ್ಥೆಗಳು ಸರ್ಕಾರದ ಬಡ್ಡಿ ಸಹಾಯಧನವನ್ನು ಒಳಗೊಂಡಂತೆ ಶೇ.11 ರ ಬಡ್ಡಿ ದರದಲ್ಲಿ ಮಾತ್ರ ಸಾಲಗಳನ್ನು ನೇಕಾರರಿಗೆ ಒದಗಿಸತಕ್ಕದ್ದು.

3) ಈ ಯೋಜನೆಯಡಿ ಸಾಲ ಪಡೆಯುವ ಪ್ರಸ್ತಾವನೆಗಳನ್ನು ನೇಕಾರರು ಜಿಲ್ಲೆಯ ಕೈಮಗ್ಗ ಮತ್ತು ಜವಳಿ ಇಲಾಖೆಗೆ ಸಲ್ಲಿಸತಕ್ಕದ್ದು. ಜಿಲ್ಲಾ ಮಟ್ಟದ ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಿ ಅರ್ಹ ಫಲಾನುಭವಿಗಳ ಸಾಲದ ಪ್ರಸ್ತಾವನೆಗಳನ್ನು ಸಂಬಂಧಿಸಿದ ಬ್ಯಾಂಕ್‌ಗಳಿಗೆ ಸಾಲ ಮಂಜೂರಾತಿಗೆ ಶಿಫಾರಸ್ಸು ಮಾಡತಕ್ಕದ್ದು. ಇಲಾಖೆಯಿಂದ ಶಿಫಾರಸ್ಸು ಮಾಡಲಾದ ಪ್ರಸ್ತಾವನೆಗಳಿಗೆ / ನೇಕಾರರುಗಳಿಗೆ ಮಾತ್ರ ಮೇಲ್ಕಂಡ ಬ್ಯಾಂಕ್‌ಗಳು ಈ ಯೋಜನೆಯಡಿ ಸಾಲ ನೀಡತಕ್ಕದ್ದು ಹಾಗೂ ಇಂತಹ ಪ್ರಸ್ತಾವನೆಗಳಿಗೆ ಮಾತ್ರ ಇಲಾಖೆಯಿಂದ ಬಡ್ಡಿ ಸಹಾಯಧನ ಪಡೆಯಲು ಕ್ಲೈಮ್‌ಗಳನ್ನು ಇಲಾಖೆಗೆ ಕಳುಹಿಸತಕ್ಕದ್ದು.

..2.

4) ಈ ಯೋಜನೆಯಡಿ ನೇಕಾರರಿಗೆ ಪ್ರಾಥಮಿಕ ಹಂತದಲ್ಲಿ ನೇಕಾರರ ಸಹಕಾರ ಸಂಘಗಳು/ ಕೃಷಿ ಪತ್ತಿನ ಸಹಕಾರ ಸಂಘಗಳು / ಕೃಷಿಯೇತರ ಪತ್ತಿನ ಸಹಕಾರ ಸಂಘಗಳು / ಸಹಕಾರ ಬ್ಯಾಂಕ್‌ಗಳು ನೇಕಾರರಿಗೆ ಒದಗಿಸುವ ಶೇಕಡ 1 ರ ಬಡ್ಡಿ ದರದ ಸಾಲಗಳ ಮೇಲೆ ಶೇಕಡ 10 ರ ದರದಲ್ಲಿ ಬಡ್ಡಿ ಸಹಾಯಧನವನ್ನು ಹಾಗೂ ಶೇಕಡ 3 ರ ಬಡ್ಡಿ ದರದ ಸಾಲಗಳ ಮೇಲೆ ಶೇಕಡ 8 ರ ದರದಲ್ಲಿ ಬಡ್ಡಿ ಸಹಾಯಧನವನ್ನು ಸಂಬಂಧಪಟ್ಟ ನೇಕಾರ ಸಹಕಾರ ಸಂಘಗಳಿಗೆ, ಕೈಗಾರಿಕಾ ಸಹಕಾರ ಬ್ಯಾಂಕ್‌ಗಳಿಗೆ / ಕೃಷಿ ಪತ್ತಿನ ಸಹಕಾರ ಸಂಘಗಳು / ಕೃಷಿಯೇತರ ಪತ್ತಿನ ಸಹಕಾರ ಸಂಘಗಳಿಗೆ, ಜಿಲ್ಲಾ ಕೇಂದ್ರ (ಡಿ.ಸಿ.ಸಿ) ಬ್ಯಾಂಕ್‌ಗಳಿಗೆ ಮತ್ತು ಕರ್ನಾಟಕ ರಾಜ್ಯ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ (ಕಸ್ಕಾರ್ಡ್) ಬ್ಯಾಂಕ್‌ಗಳಿಗೆ ಒದಗಿಸುತ್ತದೆ ಹಾಗೂ ರೂ.3.00 ಲಕ್ಷಗಳಿಗಿಂತ ಹೆಚ್ಚಿನ ಅಲ್ಪಾವಧಿ ಸಾಲಗಳ ಮತ್ತು ರೂ.5.00 ಲಕ್ಷಗಳಿಗಿಂತ ಹೆಚ್ಚಿನ ದೀರ್ಘಾವಧಿ ಸಾಲಗಳಿಗೆ ಸಹಕಾರ ಸಂಸ್ಥೆಗಳು ವಿಧಿಸುವ ಸಾಮಾನ್ಯ ಬಡ್ಡಿ ದರವು ಅನ್ವಯವಾಗುತ್ತದೆ.

5) ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್, ಡಿ.ಸಿ.ಸಿ. ಬ್ಯಾಂಕ್‌ಗಳು, ನೇಕಾರರ ಸಹಕಾರ ಸಂಘಗಳು, ಕೃಷಿ ಪತ್ತಿನ ಸಹಕಾರ ಸಂಘಗಳು, ಕೃಷಿಯೇತರ ಪತ್ತಿನ ಸಹಕಾರ ಸಂಘಗಳು, ಕಸ್ಕಾರ್ಡ್, ಪಿಕಾರ್ಡ್ ಬ್ಯಾಂಕ್‌ಗಳು ಹಾಗೂ ಇತರೆ ಕೈಗಾರಿಕಾ ಸಹಕಾರ ಬ್ಯಾಂಕ್‌ಗಳು ಕೈಮಗ್ಗ ಮತ್ತು ವಿದ್ಯುತ್‌ಮಗ್ಗಗಳ ನೇಕಾರರಿಗೆ ಶೇ.1 ರ ಬಡ್ಡಿ ದರದಲ್ಲಿ ರೂ.2.00 ಲಕ್ಷಗಳ ವರೆಗೆ ಸಾಲ ಮತ್ತು ಶೇ.3ರ ಬಡ್ಡಿ ದರದಲ್ಲಿ ರೂ.2.00 ಲಕ್ಷಗಳಿಂದ ರೂ.5.00 ಲಕ್ಷಗಳ ವರೆಗೆ ಮೇಲಿನ ಮಿತಿಗೊಳಪಟ್ಟು ಒದಗಿಸಲು ಅಗತ್ಯವಾದ ಕ್ರಮವನ್ನು ಕೈಗೊಳ್ಳತಕ್ಕದ್ದು.

6) ಈ ಯೋಜನೆಯಡಿ ವಿತರಿಸಲಾದ ನೇಕಾರಿಕೆ ಸಾಲಗಳಿಗೆ ಸಂಬಂಧಿಸಿದಂತೆ ಸರ್ಕಾರದ ಬದ್ಧತೆಯು ಮೇಲಿನ ಮಿತಿಗೆ ಹಾಗೂ ಸಾಲದ ಅವಧಿಗೆ ಸೀಮಿತವಾಗಿರುತ್ತದೆ. ಆದಾಗ್ಯೂ ನೇಕಾರರು ನಿಗದಿತ ದಿನಾಂಕದಂದು ಸಾಲ ಮರುಪಾವತಿಸಲು ವಿಫಲವಾಗಿ ಸುಸ್ತಿದಾರರಾದಲ್ಲಿ, ಸರ್ಕಾರದ ಬದ್ಧತೆ ಇರುವುದಿಲ್ಲ.

7) ಸಾಲಗಾರರು ಇಂತಹ ಮುದ್ದತು ಮೀರಿದ ಕಂತುಗಳಲ್ಲಿ ಇರುವ ಸಾಲಗಳನ್ನು ಸಾಮಾನ್ಯ ಬಡ್ಡಿಯ ದರದಲ್ಲಿ ಇತರ ವೆಚ್ಚಗಳೊಂದಿಗೆ ಮರುಪಾವತಿಸಬೇಕಾಗುತ್ತದೆ. ಒಂದು ವೇಳೆ ಮುದ್ದತು ಮೀರಿದ ಇಂತಹ ಸಾಲಗಳ ಕಂತುಗಳನ್ನು ಸಾಮಾನ್ಯ ಬಡ್ಡಿ ದರದಲ್ಲಿ ಇತರ ವೆಚ್ಚಗಳೊಂದಿಗೆ ಮರುಪಾವತಿಸಿದ ಪಕ್ಷದಲ್ಲಿ ನಂತರದ ಚಾಲ್ತಿ ಕಂತುಗಳಿಗೆ ಶೇಕಡ 1 ರ ಹಾಗೂ ಶೇಕಡ 3 ರ ಬಡ್ಡಿಯ ರಿಯಾಯಿತಿಯ ಸೌಲಭ್ಯಗಳು ಮುಂದುವರೆಯುತ್ತದೆ.

8) ಈ ಯೋಜನೆಯಡಿ ಪ್ರತಿ ಕೈಮಗ್ಗ ಹಾಗೂ ಅದರ ಸಲಕರಣೆಗಳ ಖರೀದಿಗೆ ಗರಿಷ್ಠ ರೂ.30,000/- ಗಳನ್ನು, ದುಡಿಮೆ ಬಂಡವಾಳಕ್ಕಾಗಿ ರೂ.25,000/- ಗಳನ್ನು ಹಾಗೂ ಪ್ರತಿ ವಿದ್ಯುತ್‌ಮಗ್ಗ ಖರೀದಿಗೆ ರೂ.1,50,000/-ಗಳು, ದುಡಿಮೆ ಬಂಡವಾಳಕ್ಕಾಗಿ ರೂ.45,000/-ಗಳಂತೆ ಸಹಕಾರ ಬ್ಯಾಂಕ್‌ಗಳು/ ಸಹಕಾರ ಸಂಘಗಳು ಸಾಲವನ್ನು ಮಂಜೂರು ಮಾಡಬಹುದಾಗಿರುತ್ತದೆ. ಇಲಾಖಾ ಅಧಿಕಾರಿಗಳಿಂದ ಕ್ಲೇಮ್‌ಗಳ ಬಗ್ಗೆ ಸ್ಥಳ ಪರಿಶೀಲಿಸುವ ಸಮಯದಲ್ಲಿ ಖರೀದಿಗೆ ಸಂಬಂಧಿಸಿದ ಅವಶ್ಯವಿರುವ ಬಿಲ್ಲುಗಳನ್ನು ನೇಕಾರರು ಹಾಜರುಪಡಿಸತಕ್ಕದ್ದು. ಸಹಕಾರ ಬ್ಯಾಂಕ್‌ಗಳು ಸಾಲ ವಸೂಲಾತಿಯನ್ನು (EMI) ತ್ರೈಮಾಸಿಕವಾಗಿ ನಿಗದಿಪಡಿಸಬಹುದಾಗಿರುತ್ತದೆ.

..3.

9) ಈ ಯೋಜನೆಯ ಅವಧಿಯಲ್ಲಿ ಬಡ್ಡಿ ಸಹಾಯಧನವು ಪೂರ್ಣವಾಗಿ ಮರುಪಾವತಿಯಾಗುವ ಅಲ್ಪಾವಧಿ, ಮಧ್ಯಮಾವಧಿ ಮತ್ತು ದೀರ್ಘಾವಧಿ (ಕ್ಯಾಶ್ ಕ್ರೆಡಿಟ್ ಸಾಲಗಳನ್ನು ಹೊರತು ಪಡಿಸಿ) ಸಾಲಗಳಿಗೆ ಮಾತ್ರ ದೊರೆಯುತ್ತದೆ. ಈ ಸೌಲಭ್ಯವು ಸಾಲ ಮರುಪಾವತಿಯ ಗಡುವಿನ ದಿನಾಂಕದವರೆಗೆ ಅಥವಾ ಪೂರ್ಣವಾಗಿ ಸಾಲ ಮರುಪಾವತಿಯಾದ ದಿನಾಂಕ ಇದರಲ್ಲಿ ಯಾವುದು ಮೊದಲೋ ಆ ಅವಧಿಗೆ ಅನ್ವಯಿಸುತ್ತದೆ.

10) ನೇಕಾರರು ನೇಕಾರಿಕೆ ಉದ್ದೇಶಕ್ಕಾಗಿ ನೇಕಾರರ ಸಹಕಾರ ಸಂಘಗಳು / ಪತ್ತಿನ ಸಹಕಾರ ಸಂಘಗಳು / ಕೃಷಿ ಪತ್ತಿನ ಸಹಕಾರ ಸಂಘಗಳು / ಕೃಷಿಯೇತರ ಪತ್ತಿನ ಸಹಕಾರ ಸಂಘಗಳು / ಸಹಕಾರ ಬ್ಯಾಂಕ್ (ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್‌ಗಳು, ಪಟ್ಟಣ ಸಹಕಾರ ಬ್ಯಾಂಕ್‌ಗಳು, ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ಗಳು ಹಾಗೂ ಇತರೆ ಕೈಗಾರಿಕೆ ಸಹಕಾರ ಬ್ಯಾಂಕ್‌ಗಳು) ಗಳಿಂದ ವಾರ್ಷಿಕ ಶೇ.1 ಹಾಗೂ ಶೇ.3 ರ ಬಡ್ಡಿ ದರದಲ್ಲಿ ಪಡೆದ ಸಾಲಕ್ಕೆ ಬಡ್ಡಿ ಸಹಾಯಧನ ನೀಡುವ ಬಗ್ಗೆ ಕ್ಲೈಂ ಬಿಲ್ಲುಗಳನ್ನು ಬ್ಯಾಂಕ್‌ಗಳು ಜಿಲ್ಲೆಯ ಕೈಮಗ್ಗ ಮತ್ತು ಜವಳಿ ಇಲಾಖೆಯ ಉಪ / ಸಹಾಯಕ ನಿರ್ದೇಶಕರುಗಳ ಕಛೇರಿಗೆ ಕಳುಹಿಸತಕ್ಕದ್ದು. ಜಿಲ್ಲೆಯ ಕೈಮಗ್ಗ ಮತ್ತು ಜವಳಿ ಇಲಾಖೆಯ ಜಂಟಿ / ಉಪ / ಸಹಾಯಕ ನಿರ್ದೇಶಕರುಗಳು ಫಲಾನುಭವಿಗಳು ಪಡೆದ ಸಾಲವು ನೇಕಾರಿಕೆ ಮತ್ತು ನೇಕಾರಿಕೆಗೆ ಸಂಬಂಧಪಟ್ಟ ಚಟುವಟಿಕೆಗಳಾದ ಮಗ್ಗಗಳ ಸ್ಥಾಪನೆ, ಕಚ್ಚಾ ಮಾಲು ಖರೀದಿ ಮತ್ತು ಸಿದ್ಧ ವಸ್ತುಗಳ ಉತ್ಪಾದನೆ, ಮಗ್ಗ ಪೂರ್ವ ಚಟುವಟಿಕೆಗಳು ಮತ್ತು ಮಗ್ಗ ನಂತರದ ಸಂಸ್ಕರಣೆ ಚಟುವಟಿಕೆಗಳು ಇತ್ಯಾದಿ ಉದ್ದೇಶಗಳಿಗೆ ನೀಡುವ ಅಲ್ಪಾವಧಿ, ಮಧ್ಯಮಾವಧಿ ಮತ್ತು ಧೀರ್ಘಾವಧಿ ಸಾಲಗಳು ಮಾತ್ರ ಉಪಯೋಗವಾಗಿರುವ ಬಗ್ಗೆ ಹಾಗೂ ಸಂಬಂಧಿಸಿದ ಜಿಲ್ಲೆಯ ಲೆಕ್ಕಪರಿಶೋಧನಾ ಇಲಾಖೆಯ ಉಪ / ಸಹಾಯಕ ನಿರ್ದೇಶಕರುಗಳು ಬಡ್ಡಿ ಸಹಾಯಧನಕ್ಕೆ ಸಂಬಂಧಿಸಿದಂತೆ ಪ್ರಸ್ತಾವನೆಯನ್ನು ಜಂಟಿಯಾಗಿ ಪರಿಶೀಲಿಸಿ ಜಂಟಿ ದೃಢೀಕರಣದೊಂದಿಗೆ ಸಾಲ ಪಡೆದ ದಾಖಲೆಗಳ ಪ್ರಸ್ತಾವನೆಯನ್ನು ಜವಳಿ ಅಭಿವೃದ್ಧಿ ಆಯುಕ್ತರಿಗೆ ಶಿಫಾರಸ್ಸು ಮಾಡತಕ್ಕದ್ದು.

11) ಕೃಷಿಯೇತರ / ಕೃಷಿ ಪತ್ತಿನ ಸಹಕಾರ ಸಂಘಗಳು/ ನೇಕಾರರ ಸಹಕಾರ ಸಂಘಗಳು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ಗಳಿಗೆ ಸಂಯೋಜಿಸಲ್ಪಟ್ಟಿದ್ದಲ್ಲಿ ಸದರಿ ಸಹಕಾರ ಸಂಘಗಳ/ ಬ್ಯಾಂಕ್‌ಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರು ಕ್ಲೇಂ ಬಿಲ್ಲುಗಳನ್ನು ತಯಾರಿಸಿ ವ್ಯವಸ್ಥಾಪಕ ನಿರ್ದೇಶಕರು, ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ಇವರಿಗೆ ಸಲ್ಲಿಸತಕ್ಕದ್ದು. ನಂತರ ವ್ಯವಸ್ಥಾಪಕ ನಿರ್ದೇಶಕರು ಕ್ಲೇಂಗಳನ್ನು ಪರಿಶೀಲಿಸಿ ಕ್ರೂಢೀಕರಿಸಿ ಜಿಲ್ಲೆಯ ಕೈಮಗ್ಗ ಮತ್ತು ಜವಳಿ ಇಲಾಖೆಯ ಉಪ / ಸಹಾಯಕ ನಿರ್ದೇಶಕರುಗಳ ಕಛೇರಿಗೆ ಕಳುಹಿಸತಕ್ಕದ್ದು. ಜಿಲ್ಲೆಯ ಕೈಮಗ್ಗ ಮತ್ತು ಜವಳಿ ಇಲಾಖೆಯ ಜಂಟಿ / ಉಪ / ಸಹಾಯಕ ನಿರ್ದೇಶಕರುಗಳು ಫಲಾನುಭವಿಗಳು ಪಡೆದ ಸಾಲವು ನೇಕಾರಿಕೆ ಮತ್ತು ನೇಕಾರಿಕೆಗೆ ಸಂಬಂಧಪಟ್ಟ ಚಟುವಟಿಕೆಗಳಾದ ಮಗ್ಗಗಳ ಸ್ಥಾಪನೆ, ಕಚ್ಚಾ ಮಾಲು ಖರೀದಿ ಮತ್ತು ಸಿದ್ಧ ವಸ್ತುಗಳ ಉತ್ಪಾದನೆ, ಮಗ್ಗ ಪೂರ್ವ ಚಟುವಟಿಕೆಗಳು ಮತ್ತು ಮಗ್ಗ ನಂತರದ ಸಂಸ್ಕರಣೆ ಚಟುವಟಿಕೆಗಳು ಇತ್ಯಾದಿ ಉದ್ದೇಶಗಳಿಗೆ ನೀಡುವ ಅಲ್ಪಾವಧಿ, ಮಧ್ಯಮಾವಧಿ ಮತ್ತು ಧೀರ್ಘಾವಧಿ ಸಾಲಗಳು ಮಾತ್ರ ಉಪಯೋಗವಾಗಿರುವ ಬಗ್ಗೆ ಹಾಗೂ ಸಂಬಂಧಿಸಿದ ಜಿಲ್ಲೆಯ ಲೆಕ್ಕಪರಿಶೋಧನಾ ಇಲಾಖೆಯ ಉಪ / ಸಹಾಯಕ ನಿರ್ದೇಶಕರುಗಳು ಬಡ್ಡಿ ಸಹಾಯಧನಕ್ಕೆ

..4

ಸಂಬಂಧಿಸಿದಂತೆ ಪ್ರಸ್ತಾವನೆಯನ್ನು ಜಂಟಿಯಾಗಿ ಪರಿಶೀಲಿಸಿ ಜಂಟಿ ದೃಢೀಕರಣದೊಂದಿಗೆ ಸಾಲ ಪಡೆದ ದಾಖಲೆಗಳ ಪ್ರಸ್ತಾವನೆಯನ್ನು ಜವಳಿ ಅಭಿವೃದ್ಧಿ ಆಯುಕ್ತರಿಗೆ ಶಿಫಾರಸ್ಸು ಮಾಡತಕ್ಕದ್ದು.

12) ಪಿಕಾರ್ಡ್ ಬ್ಯಾಂಕ್‌ಗಳಿಗೆ ಸಂಬಂಧಿಸಿದ ಕ್ಲೇಂ ಬಿಲ್ಲುಗಳನ್ನು ಕಸ್ಕಾರ್ಡ್ ಬ್ಯಾಂಕಿನ ಜಿಲ್ಲಾ ವ್ಯವಸ್ಥಾಪಕರು ತಯಾರಿಸಿ ಜಿಲ್ಲೆಯ ಕೈಮಗ್ಗ ಮತ್ತು ಜವಳಿ ಇಲಾಖೆಯ ಉಪ / ಸಹಾಯಕ ನಿರ್ದೇಶಕರುಗಳ ಕಛೇರಿಗೆ ಕಳುಹಿಸತಕ್ಕದ್ದು. ಜಿಲ್ಲೆಯ ಕೈಮಗ್ಗ ಮತ್ತು ಜವಳಿ ಇಲಾಖೆಯ ಜಂಟಿ / ಉಪ / ಸಹಾಯಕ ನಿರ್ದೇಶಕರುಗಳು ಫಲಾನುಭವಿಗಳು ಪಡೆದ ಸಾಲವು ನೇಕಾರಿಕೆ ಮತ್ತು ನೇಕಾರಿಕೆಗೆ ಸಂಬಂಧಪಟ್ಟ ಚಟುವಟಿಕೆಗಳಾದ ಮಗ್ಗಗಳ ಸ್ಥಾಪನೆ, ಕಚ್ಚಾ ಮಾಲು ಖರೀದಿ ಮತ್ತು ಸಿದ್ಧ ವಸ್ತುಗಳ ಉತ್ಪಾದನೆ, ಮಗ್ಗ ಪೂರ್ವ ಚಟುವಟಿಕೆಗಳು ಮತ್ತು ಮಗ್ಗ ನಂತರದ ಸಂಸ್ಕರಣೆ ಚಟುವಟಿಕೆಗಳು ಇತ್ಯಾದಿ ಉದ್ಧೇಶಗಳಿಗೆ ನೀಡುವ ಅಲ್ಪಾವಧಿ, ಮಧ್ಯಮಾವಧಿ ಮತ್ತು ಧೀರ್ಘಾವಧಿ ಸಾಲಗಳು ಮಾತ್ರ ಉಪಯೋಗವಾಗಿರುವ ಬಗ್ಗೆ ಹಾಗೂ ಸಂಬಂಧಿಸಿದ ಜಿಲ್ಲೆಯ ಲೆಕ್ಕಪರಿಶೋಧನಾ ಇಲಾಖೆಯ ಉಪ / ಸಹಾಯಕ ನಿರ್ದೇಶಕರುಗಳು ಬಡ್ಡಿ ಸಹಾಯಧನಕ್ಕೆ ಸಂಬಂಧಿಸಿದಂತೆ ಪ್ರಸ್ತಾವನೆಯನ್ನು ಜಂಟಿಯಾಗಿ ಪರಿಶೀಲಿಸಿ ಜಂಟಿ ದೃಢೀಕರಣದೊಂದಿಗೆ ಸಾಲ ಪಡೆದ ದಾಖಲೆಗಳ ಪ್ರಸ್ತಾವನೆಯನ್ನು ಜವಳಿ ಅಭಿವೃದ್ಧಿ ಆಯುಕ್ತರಿಗೆ ಶಿಫಾರಸ್ಸು ಮಾಡತಕ್ಕದ್ದು.

13) ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ, ಬೆಂಗಳೂರು ಇವರು ಕೈಮಗ್ಗ ಮತ್ತು ಜವಳಿ ಇಲಾಖೆಯ ವಿಭಾಗೀಯ / ಜಿಲ್ಲಾ ಮಟ್ಟದ ಅಧಿಕಾರಿಗಳಿಂದ ಬಂದ ಕ್ಲೇಂನ ಶಿಫಾರಸ್ಸುಗಳನ್ನು ಕೂಲಂಕುಷವಾಗಿ ಪರಿಶೀಲಿಸಿ ಬಡ್ಡಿ ಸಹಾಯಧನವನ್ನು ಸಂಬಂಧಪಟ್ಟ ಸಹಕಾರ ಸಂಘ / ಸಂಸ್ಥೆ / ಬ್ಯಾಂಕ್‌ಗಳಿಗೆ ನೇರವಾಗಿ ಬಿಡುಗಡೆ ಮಾಡತಕ್ಕದ್ದು.

14) ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ, ಬೆಂಗಳೂರು ಇವರು ಈ ಯೋಜನೆಯನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಅಗತ್ಯವಾದ ಎಲ್ಲಾ ಕ್ರಮಗಳನ್ನು ಕೈಗೊಳ್ಳಲು ಅಗತ್ಯವಾದ ಮಾರ್ಗದರ್ಶನ ಮತ್ತು ಸೂಚನೆಗಳನ್ನು ನೀಡಲು ಸಕ್ಷಮ ಪ್ರಾಧಿಕಾರವಾಗಿರುತ್ತಾರೆ.

15) ಈ ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಕಾಲಕಾಲಕ್ಕೆ ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ, ಬೆಂಗಳೂರು ಇವರು ನೀಡಿದ ಸೂಚನೆಗಳನ್ನು ನೇಕಾರರ ಸಹಕಾರ ಸಂಘಗಳು/ ಕೃಷಿ ಪತ್ತಿನ ಸಹಕಾರ ಸಂಘಗಳು / ಕೃಷಿಯೇತರ ಪತ್ತಿನ ಸಹಕಾರ ಸಂಘಗಳು ಎಲ್ಲಾ ಸಹಕಾರ ಬ್ಯಾಂಕ್‌ಗಳು ಪಾಲಿಸತಕ್ಕದ್ದು.

16) ಹಣ ಬಳಕೆ ಮಾಡಿರುವುದಕ್ಕೆ ಹಣ ಬಳಕೆ ಪ್ರಮಾಣ ಪತ್ರವನ್ನು ಹಾಗೂ ಕಾಲಕಾಲಕ್ಕೆ ಪ್ರಗತಿ ವರದಿಯನ್ನು ಕೇಂದ್ರ ಕಛೇರಿಗೆ ಕಡ್ಡಾಯವಾಗಿ ಸಲ್ಲಿಸತಕ್ಕದ್ದು.

(ಕೆ. ಬೋರಲಿಂಗಯ್ಯ)
ಸರ್ಕಾರದ ಉಪ ಕಾರ್ಯದರ್ಶಿ (ಜವಳಿ)
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ